ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಯವರು) :

ಅ) 1991ನೇ ಜನಗಣತಿ ಪ್ರಕಾರ ಕೊರಟಗೆರೆ ಪಟ್ಟಣದ ಜನಸಂಖ್ಯೆ 11, 531.

ಆ) ಬಂದಿದೆ.

ಇ) ಸಧ್ಯಕ್ಕೆ ಸಾಕಷ್ಟು ನೀರು ಸರಬರಾಜು ಇಲ್ಲದ ಪ್ರಯುಕ್ತ ಒಳಚರಂಡಿ ಯೋಜನೆ ತೆಗೆದು ಕೊಳ್ಳುವ ಪ್ರಸ್ತಾವನೆಯಿಲ್ಲ.

ರೇಷ್ಮೆ ಬೆಳೆಗೆ ಸಹಾಯಧನ

257 (259) ಶ್ರೀ ಹೆಚ್. ಎಂ. ಚಂದ್ರ ಶೇಖರಪ್ಪ (ಶಿವಮೊಗ್ಗ) :- ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿವಮೊಗ್ಗ ತಾಲ್ಲೂಕಿನಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ರೇಷ್ಮ ಬೆಳೆ ಬೆಳೆಯುತ್ತಿದ್ದಾರೆ: ರೈತರಿಗೆ ಯಾವ ರೀತಿ ಸಹಾಯಧನ ಸಿಗುತ್ತಿದೆ? ವಿವರ ನೀಡುವುದು

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು):

1. ಶಿವಮೊಗ್ಗ ತಾಲ್ಲೂಕಿನಲ್ಲಿ 60.00 ಎಕರೆ (32. 00 ಹೆಕ್ಟೇರ್) ಪ್ರದೇಶದಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ. ರೈತರಿಗೆ ಜಿಲ್ಲಾವಲಯ ಕಾರ್ಯಕ್ರಮಗಳಡಿ ಸಹಾಯ ಧನ ಸಿಗುತ್ತಿದೆ.

1. ರೆಂಬೆ ಪದ್ದತಿ ಹುಳುಸಾಕಾಣಿಕೆ ಆಳವಡಿಸಿದ ರೈತರಿಗೆ 2.00 ಎಕರೆಗೆ ರೂ 24000-00 ದಂತೆ ಬ್ಯಾಂಕ್ ಸಾಲ ಪಡೆದಲ್ಲಿ ಶೇ. 25 ರಂತೆ ರೂ. 6000-00 ಸಹಾಯಧನ ಸಿಗುತ್ತದೆ ಮತ್ತು ಪರಿಶಿಷ್ಟ ಜಾತಿ ಫಲಾನುಭವಿಗಳಾದಲ್ಲಿ ಶೇ. 50 ಸಹಾಯಧನ ರೂ. 12000-00 ಸಿಗುತ್ತದೆ. ಹುಳುಸಾಕುವ ಮನೆಗೆ ಶೇ. 25 ರಂತೆ ಸಹಾಯಧನ ಸಿಗುತ್ತದೆ.

2. ರೇಷ್ಮೆ ಹುಳು ಸಾಕುವ ಮನೆಗೆ ವಿಶೇಷ ಘಟಕ ಯೋಜನೆ (ಕೇಂದ್ರ0 ದಡಿ ಶೇ. 50ರ ಗರಿಷ್ಟ ರೂ 26,000-00 ಸಹಾಯಧನ ಸಿಗುತ್ತದೆ.

3. ವಿಶೇಷ ಘಟಕ ಯೋಜನೆ (ಕೇಂದ್ರ) ದಡಿ ಪ್ಯಾಕೇಜ್ ಬೆನಿಫಿಟ್ಸ್ ಕಾರ್ಯಕ್ರಮದಲ್ಲಿ ರೂ. 2500-00 ಘಟಕ ದರದಲ್ಲಿ ಉಪಕರಣಗಳನ್ನು ನೀಡಲಾಗುತ್ತಿದೆ.

4. ಹಿಪ್ಪುನೇರಳೆ ಸಾಟಿಗೆ ಪ್ರೋತ್ಸಾಹಧನವಾಗಿ ತಲಾ ಫಲಾನುಭವಿಗೆ ರೂ 2000-00 ರಂತೆ ವಿಶೇಷ ಘಟಕ ಯೋಜನೆ (ರಾಜ್ಯ) ದಡಿ ನೀಡಲಾಗುತ್ತಿದೆ.

5. ಗಿರಿಜನ ಉಪಯೋಜನೆ (ಕೇಂದ್ರ) ದಡಿ ಪ್ರತಿ ಪರಿಶಿಷ್ಟ ಪಂಗಡ ಫಲಾನುಭಿಗಳಿಗೆ ರೂ. 2500-00 ಘಟಕ ದರದಲ್ಲಿ ಉಪಕರಣ ನೀಡಲಾಗುವುದು.

6. ಕೆಟಲಿಟಿಕ್ ಯೋಜನೆಯಡಿ ಹುಳುಸಾಕುವ ಮನೆ ನಿರ್ಮಾಣಕ್ಕೆ ಶೇ. 30 ರಂತೆ ಸಹಾಯಧನ ನೀಡಲಾಗುವುದು (ರೂ. 14100-00)

7. ಹನಿ ನೀರಾವರಿ ಯೋಜನೆಯಡಿ ಹಿಪ್ಪುನೇರಳೆಗೆ ಇತರರಿಗೆ ಶೇ. 70ರಂತೆ ಮಹಿಳೆಯವರು ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ. 90ರಂತೆ ಗರಿಷ್ಟ ಹೆಕ್ಟೇರಿಗೆ 25,000 ರೂ. ಗಳ ಸಹಾಯಧನ ನೀಡಲಾಗುವುದು.

8. ನೇರ ನೆರವು ಯೋಜನೆಯಡಿ ಹುಳುಸಾಕವುದು ಮನೆ ನಿರ್ಮಾಣಕ್ಕೆ ಶೇ. 50ರಂತೆ ಸಹಾಯಧನ ನೀಡಲಾಗುವುದು(23500-00)

9. ರೇಷ್ಮೆ ಬೆಳೆಗಾರರ ಗೂಡಿಗೆ ಪ್ರತಿ ಕೆ.ಜಿ.ಗೆ ರೂ. 5.00 ರಂತೆ (ಮಹಿಳಾ ಫಲಾನುಭವಿಗೆ ರೂ 10.00 ರಂತೆ) ಪ್ರೋತ್ಸಾಹಧನ ನೀಡಲಾಗುವುದು.

10. ರೇಷ್ಮೆ ಬೆಳೆಗಾರರು ಬೆಳೆದ ದ್ವಿತಳಿ ಬಿತ್ತನೆ ಗೂಡನ್ನು ಬೇಡಿಕೆ ಇಲ್ಲದ ರೀಲಿಂಗ್‌ಗಾಗಿ ಮೂರಾಟ ಮಾಡಿದಾಗ ಬಿತ್ತನೆ ಮತ್ತು ರೀಲಿಂಗ್ ದರದ ವ್ಯತ್ಯಾಸದ ಹಣವನ್ನು ಭರಿಸಿಕೊಡಲಾಗುತ್ತದೆ.

ಶಿವಮೊಗ್ಗ ನಗರ ಸ್ವಚ್ಛತೆ ಕಾರ್ಯಗಳು

258 (26) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಶಿವಮೊಗ್ಗ ನಗರ ನೈಮರಲ್ಯದ ಬಗ್ಗೆ ನಗರಸಭೆವತಿಯಿಂದ ಖಾಸಗಿಯವರಿಗೆ ಸ್ವಚ್ಛತೆ ಬಗ್ಗೆ ಟೆಂಡರ್ ಕೊಡಲಾಗಿದೆಯೇ ಯಾವ ಆಧಾರದ ಮೇಲೆ ಟೆಂಡರ್ ಕೊಡಲಾಗುತ್ತಿದೆ; ಹಾಲಿ ಇರುವ ಪೌರ ಕಾರ್ಮಿಕರ ಕೆಲಸಗಳೇನು?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಶಿವಮೊಗ್ಗ ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳ ಪೈಕಿ ನಗರದ ಮಧ್ಯ ಭಾಗದಲ್ಲಿ ಬರುವ ಹೆಚ್ಚಿನ ಜನಸಾಂದ್ರತೆಯುಳ್ಳ ಮಾರುಕಟ್ಟೆ ಹಾಗೂ ವಾಣಿಜ್ಯ ಪ್ರದೇಶಗಳನ್ನೊಳಗೊಂಡಿರುವ 12 ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆ.

ಪೌರ ಕಾರ್ಮಿಕರ ಕೊರತೆಯಿಂದಾಗಿ ಸ್ವಚ್ಛತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸರ್ಕಾರದ ಆದೇಶ ಸಂಖ್ಯೆ ನಇ 28 ಎಸ್‌ಜಿಪಿ 94 ದಿನಾಂಕ: 19-3-94ರ ಮೇರೆಗೆ ಗುತ್ತಿಗೆಗೆ ನೀಡಲಾಗಿದೆ.

ಹಾಲಿ ಶಿವಮೊಗ್ಗ ನಗರಸಭೆಯಲ್ಲಿ 325 ಜನ ಪೌರ ಕಾರ್ಮಿಕರಿದ್ದು ಇವರನ್ನು ಹೊಸದಾಗಿ ನಗರಸಭೆಯ ವ್ಯಾಪ್ತಿಗೆ ಸೇರಿರುವ ಹಳ್ಳಿಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ. ಗುತ್ತಿಗೆಗೆ ನೀಡಿರುವ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದ ಪೌರ ಕಾರ್ಮಿಕರನ್ನು ಬೇರೆ ಬೇರೆ ವಾರ್ಡ್‌ಗಳಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ನಿಯೋಜಿಸಲಾಗಿದೆ.

ವಸತಿ ನಿಲಯಗಳ ಕಾರ್ಯ

259 (541) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ):- ಮಾನ್ಯ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗಗಳ ಅಭ್ಯರ್ಥಿಗಳಿಗೆ ಎಷ್ಟು ವಸತಿ ನಿಲಯಗಳನ್ನು ತೆರೆಯಲಾಗಿದೆ. ಅದು ಯಾವುದು ಮತ್ತು ಎಲ್ಲಿ ಕಾರ್ಯನಿರ್ವಹಿಸುತ್ತಿದೆ.